ಹೇಳುತ್ತೇನೆ. ನಮ್ಮ ಪ್ರಧಾನಮಂತ್ರಿ ತಮ್ಮ ವ್ಯಕ್ತಿತ್ವದ ಮ್ಯಾಜಿಕ್ ಬಳಸಿ ಈ ಎರಡೂ ಕ್ಯಾಂಪುಗಳ ನಡುವೆ ಸಮತೋಲನ ಸಾಧಿಸಬಲ್ಲೆ ಎಂದು ನಂಬಿದ್ದಾರೆ.'

ಜನರ ತಲಾ ಆದಾಯ, ಯಾವ ಉತ್ಪಾದನೆಗೂ ನೆರವಾಗದ ಸರ್ಕಾರಿ ಸಂಬಳದ ವರ್ಗ, ಚೀನಾ ಯುದ್ಧ ಎಲ್ಲವೂ ಲೋಹಿಯಾ ಭಾಷಣದಲ್ಲಿದ್ದವು. ಬೆರಳ ತುದಿಯಲ್ಲೇ ಅಂಕಿ ಅಂಶಗಳಿದ್ದ ಲೋಹಿಯಾ ಸರ್ಕಾರಿ ಅಂಕಿ ಅಂಶಗಳನ್ನು ಹೇಗೆ ನೋಡಬೇಕೆಂಬುದನ್ನೂ ತೋರಿಸಿಕೊಟ್ಟರು:

'ಯೋಜನಾ ಆಯೋಗದ ಸದಸ್ಯರೊಬ್ಬರು ಹೇಳಿದಂತೆ ದೇಶದ ಶೇಕಡ ಅರವತ್ತು ಕುಟುಂಬಗಳಲ್ಲಿ 27 ಕೋಟಿ ಜನ ಪ್ರತಿ ದಿನ ತಲಾ ಮೂರು ಆಣೆಯಲ್ಲಿ ಬದುಕುತ್ತಿದ್ದಾರೆ... ನಮ್ಮ ಕೃಷಿ ಕಾರ್ಮಿಕರು ದಿನಕ್ಕೆ ಹನ್ನೆರಡಾಣೆ ದುಡಿಯುತ್ತಿದ್ದಾರೆ. ಹಿಂದಿ, ಪರ್ಷಿಯನ್ ಭಾಷೆ ಕಲಿಸುವ ಟೀಚರುಗಳು ದಿನಕ್ಕೆ ಎರಡು ರೂಪಾಯಿ ದುಡಿಯುತ್ತಿದ್ದಾರೆ. ಆದರೆ ದಿನಕ್ಕೆ ಮೂರು ಲಕ್ಷ ರೂಪಾಯಿ ಗಳಿಸುವ ವ್ಯಾಪಾರ ಸಂಸ್ಥೆಯೂ ಈ ದೇಶದಲ್ಲಿದೆ.'

ಇದೇ ಭಾಷಣದಲ್ಲಿ 'ಲೋಕಸಭೆಯ ಸದಸ್ಯರು ತಂತಮ್ಮ ಮಾತೃಭಾಷೆಗಳಲ್ಲಿ ಮಾತಾಡಬೇಕು' ಎನ್ನುತ್ತಾ ಲೋಹಿಯಾ ಹೇಳಿದರು: 'ವಿಜ್ಞಾನಭವನದಲ್ಲಿ ಕಿವಿಫೋನುಗಳಲ್ಲಿ ಇತರ ಭಾಷೆಗಳ ಅನುವಾದಗಳನ್ನು ಕೇಳುವುದು ಸಾಧ್ಯವಾಗುವುದಾದರೆ, ಅದು ಇಲ್ಲೂ ಏಕೆ ಸಾಧ್ಯವಾಗಬಾರದು?'

ಸರ್ಕಾರಿ ಆಡಳಿತ ಹೇಗೆ ಕುಟುಂಬಗಳ ಸ್ವತ್ತಾಗುತ್ತಿದೆ ಎಂಬುದನ್ನು ತೋರಿಸುತ್ತಾ ಲೋಹಿಯಾ ಹೇಳುತ್ತಾರೆ: 'ಆಡಳಿತದಲ್ಲಿ ಅಪ್ಪ–ಮಕ್ಕಳ ಹಣಕಾಸುಸಂಬಂಧ ಕೂಡ ಸೇರಿಕೊಂಡಿದೆ. ಇದಕ್ಕೆ ದಾಖಲೆ ಕೊಡಬಲ್ಲೆ. ಒಂದು ರಾಜ್ಯದಲ್ಲಿ ಅಪ್ಪ ಸಾರಿಗೆ ವ್ಯವಹಾರಗಳನ್ನು ನೋಡಿಕೊಳ್ಳುತ್ತಾನೆ. ಮಗ ವಾಹನಗಳನ್ನು ಸರಬರಾಜು ಮಾಡುತ್ತಾನೆ. ವ್ಯಾಪಾರ–ರಾಜಕಾರಣಗಳ ಧೂರ್ತ ಸಂಬಂಧ ಸೃಷ್ಟಿಯಾಗಿದೆ. ಒಂದು ಮನೆಯಲ್ಲಿ ಒಬ್ಬ ರಾಜಕಾರಣಿಯಾಗುತ್ತಾನೆ; ಮತ್ತೊಬ್ಬ ವ್ಯಾಪಾರಕ್ಕಿಳಿಯುತ್ತಾನೆ ...ವ್ಯಾಪಾರ ಸಂಸ್ಥೆಗಳು ಮನ ಬಂದಂತೆ ಬೆಲೆ ಹೆಚ್ಚಿಸಿ ಜನರನ್ನು ಲೂಟಿ ಮಾಡುತ್ತಿವೆ...

'...ಜನರ ಅವಕಾಶಗಳು ಕುಸಿಯತೊಡಗಿವೆ. ಈ ದೇಶದಲ್ಲಿ ಮಹಿಳೆಯರು, ಹರಿಜನರು, ಬುಡಕಟ್ಟಿನವರು, ಹಿಂದುಳಿದ ವರ್ಗಗಳು, ಧಾರ್ಮಿಕ ಅಲ್ಪಸಂಖ್ಯಾತರು ಶೇಕಡ ತೊಂಬತ್ತು ಭಾಗ ಇದ್ದಾರೆ. ಈ ವರ್ಗಗಳಿಗೆ ವಿಶೇಷಾವಕಾಶಗಳನ್ನು ಕೊಡದಿದ್ದರೆ ದೇಶ ಮುನ್ನಡೆಯಲಾರದು. ರಷ್ಯಾದಲ್ಲಿ ಝಾರ್ ದೊರೆಯ ವಿರುದ್ಧ ನಡೆದ ದಂಗೆ, ಫ್ರೆಂಚ್ ಕ್ರಾಂತಿ ಇವೆಲ್ಲದರ ಬಗ್ಗೆ ನಮಗೆಲ್ಲ ಗೊತ್ತಿದೆ. ವಿಶೇಷಾವಕಾಶಗಳ ತತ್ವವನ್ನು ನಾವು ಅಳವಡಿಸಿಕೊಳ್ಳಲೇಬೇಕು.'

ಲೋಹಿಯಾ ಮಾತಿಗೆ ಆಳುವ ಪಕ್ಷದ ಸದಸ್ಯರು ಅಡ್ಡಿಪಡಿಸುತ್ತಲೇ ಇದ್ದರು. ಅದಕ್ಕೆ ಸೊಪ್ಪು ಹಾಕದೆ ಲೋಹಿಯಾ ಉತ್ತರ ಕೊಟ್ಟರು:

'ಆಳುವ ಪಕ್ಷದ ಬೆಂಚುಗಳಲ್ಲಿ ಕೂತಿರುವ ಜನರ ಬಗ್ಗೆ ಏನು ಹೇಳಲಿ? ಅವರೀಗ ಸರ್ಕಾರವನ್ನು ಬೆಂಬಲಿಸುತ್ತಾ ನನ್ನ ವಿರುದ್ಧ ಟೇಬಲ್ ಕುಟ್ಟುತ್ತಿರಬಹುದು. ಆದರೆ ರಾತ್ರಿ ಮನೆಯಲ್ಲಿ, 'ಲೋಹಿಯಾ ನಮ್ಮ ಅಭಿಪ್ರಾಯವನ್ನೇ ಧೈರ್ಯವಾಗಿ ಬಾಯಿಬಿಟ್ಟು ಹೇಳಿದ್ದಾನೆ' ಎನ್ನುತ್ತಾರೆ... ನಾನು ಸಾಧ್ಯವಾದಷ್ಟೂ ಸಂಯಮದಿಂದಲೇ ಮಾತಾಡಿದ್ದೇನೆ. ಇದೇ ರೀತಿಯಲ್ಲೇ ಮುಂದುವರಿಯುತ್ತೇನೆ. ಆದರೆ ಈ ಜನ ನನ್ನ ವಿರುದ್ಧ ಬಾಯಿಗೆ ಬಂದಂತೆ ಮಾತಾಡಿದ್ದಾರೆ. ನಾನೊಬ್ಬ ಅನಕ್ಷರಸ್ಥ ಎಂದಿದ್ದಾರೆ. ಪರೋಕ್ಷವಾಗಿ ನನ್ನ ಅಪ್ಪ ಅಮ್ಮನ ಬಗೆಗೂ ಮಾತಾಡಿದ್ದಾರೆ...

'...ಪ್ರಧಾನಮಂತ್ರಿಗಳು ಕೂಡ ಒರಟಾಗಿ, ಕಿಚಾಯಿಸುವ ಮಾತಾಡುತ್ತಿರುತ್ತಾರೆ... ಈ ಸಂದರ್ಭದಲ್ಲಿಯೇ ನಾನು, 'ಪ್ರಧಾನಮಂತ್ರಿಯೊಬ್ಬ ಸೇವಕ; ಸದನವೇ ದೇವರು' ಎಂದಿದ್ದು. ಈ ಸಭ್ಯ ವರ್ಣನೆ ಎಲ್ಲರಿಗೂ ಸಂತೋಷ ಉಂಟುಮಾಡಬೇಕಿತ್ತು. ಆದರೆ ನನ್ನ ವಿರುದ್ಧ ಹಲವರು ಏನೇನೋ ಮಾತಾಡಿದರು. ನಾನು ವೈಯಕ್ತಿಕ ಜಗಳಗಳಿಗೆ ಇಳಿಯಲು ಬಯಸುವುದಿಲ್ಲ. ಈವರೆಗೂ ಅಂಥ ಜಗಳಗಳಿಗೆ ನಾನು ಇಳಿದೂ ಇಲ್ಲ. ನಾನು ಇಂಥ ಜಗಳಕ್ಕೆ ಇಳಿಯಲೇಬೇಕೆಂದು ನೀವು ಒತ್ತಡ ಹಾಕುವವರೆಗೂ ಇಳಿಯುವುದಿಲ್ಲ...

'ಪ್ರಧಾನಮಂತ್ರಿಗಳು ನನ್ನನ್ನು 'ಗೂಂಡಾ', 'ಸುಳ್ಳ', 'ಅಸಭ್ಯ' ಎಂದೆಲ್ಲ ಹೇಳಿದ್ದಾರೆ. ಒಂದು ಕಾಲದಲ್ಲಿ ನಾನು ಇದಕ್ಕೆಲ್ಲ ತಿರುಗಿಸಿ ಉತ್ತರ ಕೊಡುತ್ತಿದ್ದೆ. ಈಗ ಹಾಗೆ ಮಾಡುವುದಿಲ್ಲ. ಬದಲಿಗೆ ನನಗೆ ಅವರ ಬಗ್ಗೆ ಮರುಕವಾಗುತ್ತಿದೆ. ಒಂದೊಂದು ಸಲ ಮಾತ್ರ ನನ್ನನ್ನು ಗೂಂಡಾ ಎಂದಾಗ, ಗೂಂಡಾಗಿರಿ ತೋರಿಸಬೇಕು ಎನ್ನಿಸುತ್ತದೆ... ಒಂದು ಕಾಲಕ್ಕೆ ಈ ಮುಖದಲ್ಲಿ ಎಂಥ ಘನತೆ ಇತ್ತು ಎಂದರೆ, ನಾನು ಆ ಮುಖವನ್ನು ಪ್ರೀತಿಸಿದ್ದುಂಟು. ಕೆಲ ಬಗೆಯ ತಪ್ಪು ಕಲ್ಪನೆಗಳು ಈಗಲೂ ಇರಬಹುದು. ಈಗ ಯಾವ ತಪ್ಪು ಕಲ್ಪನೆಯೂ ಬಾರದಿರಲಿ ಎಂದು ಸ್ಪಷ್ಟವಾಗಿ ಹೇಳುತ್ತೇನೆ... ನಾನು ಆ ಮುಖವನ್ನು ಪ್ರೀತಿಸುವುದಿಲ್ಲ.

'...ಪ್ರಧಾನಮಂತ್ರಿಗಳು ರಾಜಿನಾಮೆ ಕೊಟ್ಟು ಮತ್ತೆ ಫೂಲ್‌ಪುರದಿಂದ ಸ್ಪರ್ಧಿಸಲಿ ಎನ್ನಬೇಕೆಂದಿದ್ದೆ. ಆದರೆ ಇಡೀ ಮಂತ್ರಿಮಂಡಲವೇ ಅಧಿಕಾರ ಬಿಟ್ಟು ಕೆಳಗಿಳಿಯಬೇಕು ಎಂದು ಈಗ ಹೇಳುತ್ತಿದ್ದೇನೆ.'

ಕಾಂಗ್ರೆಸ್ ಪಕ್ಷಕ್ಕೆ ಭಾರಿ ಬಹುಮತವಿದ್ದುದರಿಂದ ಸರ್ಕಾರಕ್ಕೆ ಏನೂ ಆಗಲಿಲ್ಲ. ಆದರೆ ಲೋಹಿಯಾ ತಾವು ಹೇಳಬೇಕಾದುದನ್ನು ಲೋಕಸಭೆಗೆ ಹಾಗೂ ಭಾರತದ ಜನತೆಗೆ ಅಧಿಕೃತವಾಗಿ ತಲುಪಿಸಿದ್ದರು.

***

ಇತ್ತ ಮೈಸೂರು ರಾಜ್ಯ ವಿಧಾನಸಭೆಯಲ್ಲಿ ಲೋಹಿಯಾರ ನೆಚ್ಚಿನ ಸಂಗಾತಿ ಗೋಪಾಲಗೌಡರು ಆಳುವ ಪಕ್ಷದ ಮರ್ಜಿಯಿಲ್ಲದೆ ಮಾತಾಡುತ್ತಿದ್ದರು; ಉಳುವವನೇ ಹೊಲದೊಡೆಯ ಪ್ರಶ್ನೆಯನ್ನು ಮತ್ತೆ ಕೈಗೆತ್ತಿಕೊಂಡಿದ್ದರು. ಸರ್ಕಾರವನ್ನು ಎಚ್ಚರದಲ್ಲಿಟ್ಟಿದ್ದರು. ಅತ್ತ ಗೌಡರ ತಾಯಿ ಹಾಗೂ ಗೆಳೆಯರೂ ನಲವತ್ತು ವರ್ಷ ತಲುಪುತ್ತಿರುವ ಗೌಡರು ಮದುವೆಯಾಗಬೇಕೆಂದು ಹೇಳುತ್ತಲೇ ಇದ್ದರು. ಗೌಡರು ವಿಷಯವನ್ನು ಮುಂದೂಡುತ್ತಲೇ ಇದ್ದರು! 1963ರಲ್ಲಿ ಧಾರವಾಡದ ಸೋನಕ್ಕನವರನ್ನು ಮದುವೆಯಾಗಲು ಕಡಿದಾಳ್ ಮಂಜಪ್ಪನವರು ಗೌಡರಿಗೆ ಸಲಹೆ ಕೊಟ್ಟರು.

ಸೋನಕ್ಕನವರ ಮನೆಯವರಿಗೂ, ಗೋಪಾಲಗೌಡರಿಗೂ ಸಂಬಂಧ ಒಪ್ಪಿಗೆಯಾಯಿತು. ಆದರೆ ಡಿಸೆಂಬರ್ ಕೊನೆಯವರೆಗೆ ಗೋಪಾಲಗೌಡರು ಏನೂ ಹೇಳಲಿಲ್ಲ. ಅದಕ್ಕೆ ಕಾರಣ ನಂತರ ಸೋನಕ್ಕನವರಿಗೆ ತಿಳಿಯಿತು. ಲೋಹಿಯಾ ತಮ್ಮ ಮದುವೆಗೆ ಒಪ್ಪಿಗೆ ಕೋರಿ ಲೋಹಿಯಾಗೆ ಪತ್ರ ಬರೆದಿದ್ದರೆಂದು ಕಾಣುತ್ತದೆ! ಚುನಾವಣೆ, ಲೋಕಸಭೆಯ ಅಧಿವೇಶನಗಳ ನಡುವೆ ಲೋಹಿಯಾ ಗೋಪಾಲಗೌಡರ ಪತ್ರವನ್ನು ಗಮನಿಸಿದ್ದರೋ ಇಲ್ಲವೋ ತಿಳಿಯಲಿಲ್ಲ.

ಈ ಕಾಲವನ್ನು ಕೋಣಂದೂರು ಲಿಂಗಪ್ಪ ನೆನೆಯುತ್ತಾರೆ:

ಲೋಹಿಯಾರ ಒಪ್ಪಿಗೆಗಾಗಿ ಕಾಯುತ್ತಿದ್ದ ಗೋಪಾಲಗೌಡರು ಮದುವೆಗೆ ಒಪ್ಪಿಗೆ ಕೊಡಲು ತುಂಬ ಸಮಯ ತೆಗೆದುಕೊಂಡಿದ್ದನ್ನು ಕಂಡು ಕಡಿದಾಳ್ ಮಂಜಪ್ಪನವರಿಗೆ ರೇಗಿತು. 'ಓಹೋ ಇವನೇನು ಭಾರೀ ದಿಲೀಪ್ ಕುಮಾರ! ಪೃಥ್ವೀರಾಜ್ ಕಪೂರ! ಒಪ್ಪಿಗೆ ಕೊಡೋದಕ್ಕೆ ಇಷ್ಟು ಸಮಯ ತಗೊಂತಿದಾನೆ!' ಎಂದು ಕುಟುಕುತ್ತಿದ್ದರು.

ಕೊನೆಗೂ ಲೋಹಿಯಾ ಗೋಪಾಲಗೌಡರಿಗೆ ಹಿಂದಿಯಲ್ಲಿ ಬರೆದ ಒಂದು ಸಾಲಿನ ಪತ್ರದಲ್ಲಿ 'ಪ್ರಿಯ ಸಾಥಿ, ಸುಖಿ ರಹೋ' ಎಂಬ ಸಂದೇಶ ಬಂತು. ಗೋಪಾಲಗೌಡರು ಮದುವೆಗೆ ಒಪ್ಪಿಗೆ ಕೊಟ್ಟರು. ಗೌಡರು ಮದುವೆಯಾದರೂ ಮನೆಯಿರಲಿಲ್ಲ. ಶಾಸಕರ ಭವನದಲ್ಲೇ ನವ ದಂಪತಿಗಳ ಬಿಡಾರ.

***

ಅತ್ತ ಲೋಹಿಯಾ ಲೋಕಸಭಾ ಸದಸ್ಯರಾದ ಮೇಲೆ ಜೀವನದಲ್ಲಿ ಮೊದಲ ಬಾರಿಗೆ ಅವರು ಇರಲು ಒಂದು ಮನೆ ಸಿಕ್ಕಿತು! ರಮಾ ಮಿತ್ರ ಕೂಡ ಅಲ್ಲಿ ಹೆಚ್ಚು ಇರಲು ಶುರು ಮಾಡಿದರು. ಲೋಹಿಯಾಗೆ ಟೈಪಿಸ್ಟ್, ಸೆಕ್ರೆಟರಿ ಯಾರೂ ಇರಲಿಲ್ಲ. ಅವರೇ ಪತ್ರ, ಲೇಖನಗಳು ಎಲ್ಲವನ್ನೂ ಬರೆಯುತ್ತಿದ್ದರು.

ರಮಾ ಮಿತ್ರ, ಜ್ಞಾನೇಶ್ವರ ಮಿತ್ರ ಪತ್ರವ್ಯವಹಾರಗಳನ್ನು ನೋಡುತ್ತಿದ್ದರು. ಲೋಕಸಭೆಯ ಭಾಷಣಗಳ ಟಿಪ್ಪಣಿಗಳನ್ನು, ರೆಫರೆನ್ಸ್‌ಗಳನ್ನು ಸಿದ್ಧ ಮಾಡುತ್ತಿದ್ದರು.

ಎರಡೂ ಸಮಾಜವಾದಿ ಪಕ್ಷಗಳು ಮತ್ತೆ ಒಂದಾಗುವ ಮಾತುಕತೆಗಳು ನಡೆಯುತ್ತಿದ್ದವು. ವಿರೋಧ ಪಕ್ಷಗಳಿಗೂ ಕಾಲ ಬರತೊಡಗಿತ್ತು.

(ಸಶೇಷ)